# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ./ಎಸ್.ಟಿ. ನಂ. 08/2023**

ಪ್ರ.ವ.ಬೋ. ದಿನಾಂಕ – 04.02.2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ವೀರಭದ್ರಪ್ಪ | ಪ್ರಾ.ಸಾ. | – 05 |
| ತಂದೆಯ ಹೆಸರು | – ಕಣಿವೆಪ್ಪ | ಚಾ.ಸಾ. | – 07 |
| ವಯಸ್ಸು | – 46 ವರ್ಷ | | |
| ಉದ್ಯೋಗ | – ಕೂಲಿ ಕೆಲಸ | | |
| ವಾಸ ಸ್ಥಳ | – ಬಿ ದುರ್ಗ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ:1, 5 ಮತ್ತು ಆರೋಪಿತರು ಗೊತ್ತು. ಆರೋಪಿತರು ಮತ್ತು ಚಾಸಾ:5 ರವರ ನಡುವೆ ಆದ ಗಲಾಟೆಯನ್ನು ನೋಡಿಲ್ಲ, ಆರೋಪಿತರು ಚಾಸಾ:5 ರವರಿಗೆ ಅವ್ಯಾಚ್ಯವಾಗಿ ಜಾತಿ ನಿಂದನೆ ಮಾಡಿಲ್ಲ, ಹಲ್ಲೆ ಮಾಡಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ನಾನು ದಿ. 14.9.2022 ರಂದು ಸಂಜೆ 5.30 ಗಂಟೆಗೆ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ನಮ್ಮ ಗ್ರಾಮದ ಕಾಶಿ ಮಹಾಲಿಂಗಸ್ವಾಮಿ ಪ್ರೌಢಶಾಲೆಯ ಮೈದಾನದಲ್ಲಿ ಯಾರೋ ಹುಡುಗರು ಗಲಾಟೆ ಮಾಡುತ್ತಿದ್ದು, ಹೋಗಿ ನೋಡಿದಾಗ ಚಾಸಾ:2, 3 ಇದ್ದು ಅವರನ್ನು ವಿಚಾರ ಮಾಡಲಾಗಿ, ಚಾಸಾ:5 ಇವರೊಂದಿಗೆ ಆರೋಪಿತರು ವಾಲಿಬಾಲ್ ಆಟ ಆಡುವ ವಿಚಾರದಲ್ಲಿ ಜಾತಿ ನಿಂದನೆ ಮಾಡಿ, ಕೈ ಕಾಲುಗಳಿಂದ ಹೊಡೆದಿದ್ದು, ಚಾಸಾ:2, 3 ಜಗಳ ಬಿಡಿಸಿದ್ದ ಬಗ್ಗೆ ಮತ್ತು ಚಾಸಾ:5 ಇವರನ್ನು ಚಾಸಾ:1 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರ ಬಗ್ಗೆ ತಿಳಿಸಿದರು ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ:11 ಎಂದು ಗುರುತಿಸಲಾಯಿತು. ನಿಪಿ:11 ರಂತೆ ಹೇಳಿಕೆ

ನೀಡಿದ್ದರೂ, ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

**ಮರು ವಿಚಾರಣೆ ಇಲ್ಲ**:

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

*ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ*
*ನ್ಯಾಯಾಧೀಶರು, ಚಿತ್ರದುರ್ಗ.*